**FEBRUARY 27, 2026**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಶಿವಮೊಗ್ಗ ನಗರದ ಎಲ್ಲ ಉದ್ಯಾನಗಳಲ್ಲಿ,** ರೇಡಿಯೋ ಅಳವಡಿಕೆಗೆ, ಜನಪ್ರತಿನಿಧಿಗಳ ಪ್ರಸ್ತಾವ; ಕೇಂದ್ರ ಸಚಿವ ಎಲ್.ಮುರುಗನ್, ತಾತ್ವಿಕ ಒಪ್ಪಿಗೆ.
- **ಮೈಸೂರಿನಲ್ಲಿ, ಇಂದಿನಿಂದ ಮೂರು ದಿನ,** ದಕ್ಷಿಣ ಭಾರತದ, ಕಿಸಾನ್ ಸ್ವರಾಜ್ ಸಮ್ಮೇಳನ.
- **ಉತ್ತರಕನ್ನಡ ಜಿಲ್ಲೆ, ಅಘನಾಶಿನಿ ನದಿ ಕಣಿವೆಯ,** ಅಪರೂಪದ ಅಪ್ಪೆ ಮಿಡಿ ಮಾವಿನ ತಳಿ ಸಂರಕ್ಷಣೆಗೆ, ಪರಿಸರಾಸಕ್ತರಿಂದ ಪ್ರಸ್ತಾವ.
- **ಇಂದು ರಾಷ್ಟ್ರೀಯ ಸಸಾರಜನಕ,** ಪ್ರೊಟೀನ್ ಜಾಗೃತಿ ದಿನ.

<><><>

**ಶಿವಮೊಗ್ಗ ನಗರದ ಎಲ್ಲ ಉದ್ಯಾನಗಳಲ್ಲಿ,** ಆಕಾಶವಾಣಿ ಕಾರ್ಯಕ್ರಮಗಳನ್ನು ಶ್ರೀಸಾಮಾನ್ಯರು ಆಲಿಸುವಂತೆ, ಪ್ರಾಯೋಗಿಕವಾಗಿ ರೇಡಿಯೋ ಅಳವಡಿಸುವಂತೆ, ಜನಪ್ರತಿನಿಧಿಗಳ ಪ್ರಸ್ತಾವಕ್ಕೆ, ಕೇಂದ್ರದ ಮಾಹಿತಿ ಹಾಗೂ ಪ್ರಸಾರ ಖಾತೆ ರಾಜ್ಯ ಸಚಿವ ಎಲ್.ಮುರುಗನ್, ತಾತ್ವಿಕ ಒಪ್ಪಿಗೆ ಸೂಚಿಸಿದ್ದಾರೆ. ವಜ್ರ ಮಹೋತ್ಸವ ಸಂಭ್ರಮದಲ್ಲಿರುವ, ಆಕಾಶವಾಣಿಯ ಭದ್ರಾವತಿ ಕೇಂದ್ರಕ್ಕೆ, ನೂತನವಾಗಿ ಅಳವಡಿಸಲಾದ, 10 ಕಿಲೋವ್ಯಾಟ್ ಸಾಮರ್ಥ್ಯದ ಎಫ್.ಎಂ. ಪ್ರೇಷಕವನ್ನು, ಶಿವಮೊಗ್ಗದ ವಿದ್ಯಾನಗರದಲ್ಲಿ, ಸಚಿವರು ಲೋಕಾರ್ಪಣೆಗೊಳಿಸಿದರು. ಬಳಿಕ ಮಾತನಾಡಿ, ಆಕಾಶವಾಣಿ ಭದ್ರಾವತಿ ಕೇಂದ್ರ, 25ನೇ ಎಫ್.ಎಂ. ಪ್ರೇಷಕವಾಗಿದ್ದು, 101.4 ತರಂಗಾಂತರದ ಮೂಲಕ, 8 ಜಿಲ್ಲೆಗಳ ವ್ಯಾಪ್ತಿ ಹಾಗೂ 3 ಸಾವಿರದ 500 ಚದರ ಕಿಲೋ ಮೀಟರ್ ವರೆಗೆ ತಲುಪುವ, ಸಾಮರ್ಥ್ಯ ಹೊಂದಿದೆ. ಕೇಂದ್ರ ಸರ್ಕಾರ, ಡಿಜಿಟಲ್ ಹಾಗೂ ಸಂವಹನ ಮಾಧ್ಯಮಗಳ, ಮೂಲಸೌಕರ್ಯ ಹಾಗೂ ಗುಣಮಟ್ಟ ವೃದ್ಧಿಗಾಗಿ, 2 ಸಾವಿರ ಕೋಟಿ ರೂಪಾಯಿ ವಿನಿಯೋಗಿಸುತ್ತಿದೆ ಎಂದರು. ಸಂಸದ ಬಿ.ವೈ.ವಿಜಯೇಂದ್ರ, ಶಾಸಕ ಎಸ್.ಎನ್.ಚನ್ನಬಸಪ್ಪ, ಆಕಾಶವಾಣಿಯ ಮಹಾನಿರ್ದೇಶಕ ರಾಜೇಂದ್ರಕುಮಾರ, ಆಕಾಶವಾಣಿ ದಕ್ಷಿಣ ವಲಯದ ಪ್ರಸಾರ ಕಾರ್ಯಾಚರಣೆ ಅಪರ ಮಹಾನಿರ್ದೇಶಕಿ, ಗೀತಾರಾಣಿ ಸೇರಿದಂತೆ, ಅನೇಕ ಗಣ್ಯರು ಪಾಲ್ಗೊಂಡಿದ್ದರು.

<><><>

**ದಕ್ಷಿಣ ಭಾರತದ, ಕಿಸಾನ್ ಸ್ವರಾಜ್ ಸಮ್ಮೇಳನ,** ಇಂದಿನಿಂದ ಮೂರು ದಿನಗಳ ಕಾಲ, ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ, ಮುಕ್ತ ಗಂಗೋತ್ರಿ ಆವರಣದಲ್ಲಿ ನಡೆಯಲಿದೆ. 'ಜೀವ ವೈವಿಧ್ಯ ಮೇಳ'ಕ್ಕಾಗಿ,ಅಸ್ಸಾಂ, ಆಂಧ್ರಪ್ರದೇಶ, ಕೇರಳ, ತೆಲಂಗಾಣ, ತಮಿಳುನಾಡು, ಮತ್ತು ಮಹಾರಾಷ್ಟ್ರದಿಂದ, ಐವತ್ತಕ್ಕೂ ಹೆಚ್ಚು ಬೀಜ ಸಂರಕ್ಷಕರು, ವಿವಿಧ ಬಗೆಯ ದೇಸಿ ಬೀಜ, ಹಣ್ಣು, ಕಾಯಿ, ತೆನೆಗಳನ್ನು ಪ್ರದರ್ಶನಕ್ಕೆ ತಂದಿದ್ದಾರೆ. ರಾಷ್ಟ್ರ ಪ್ರಶಸ್ತಿ ಪುರಸ್ಕೃತ, ಕೇರಳದ ವಯನಾಡಿನ ಶಾಜಿ, ಇನ್ನೂರಕ್ಕೂ ಹೆಚ್ಚು ಗೆಡ್ಡೆ ಗೆಣಸುಗಳನ್ನು ಪ್ರದರ್ಶಿಸಲಿದ್ದಾರೆ. ಹೆಗ್ಗಡದೇವನಕೋಟೆಯ, ಅಂತರಸಂತೆಯ, ಹುಲಿಕಾಡು ರೈತ ಉತ್ಪಾದಕರ ಕಂಪೆನಿಯ, ಪರ್ಪಲ್ ಯಾಮ್, ಬಳ್ಳಿ ಆಲೂಗೆಡ್ಡೆ ಮತ್ತು ಉತ್ತರಿ ಗೆಣಸುಗಳನ್ನು ಹಾಗೂ ಆಂಧ್ರ ಪ್ರದೇಶದ ಅರಕು ವ್ಯಾಲಿ, ಸಂಜೀವಿನಿ ಆದಿವಾಸಿ ಸಂಘ, ಅಪರೂಪದ ಗೆಡ್ಡೆ ಗೆಣಸುಗಳನ್ನು ಪ್ರದರ್ಶನಕ್ಕೆ ತಂದಿವೆ. ನೈಸರ್ಗಿಕ ಕೃಷಿ ಪ್ರವೀಣ, ಪದ್ಮಶ್ರೀ ಸುಭಾಷ ಶರ್ಮಾ, ಗೋ ಕೃಪಾಮೃತ ಸಂಶೋಧಕ ಗುಜರಾತಿನ ಗೋಪಾಲ ಭಾಯಿ ಸುತಾರಿಯ ಸೇರಿದಂತೆ, ಹಲವು ಸಾಧಕ ಕೃಷಿಕರು ತಮ್ಮ ಅನುಭವ ಹಂಚಿಕೊಳ್ಳಲಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಕಿಸಾನ್ ಸ್ವರಾಜ್ ಸಮ್ಮೇಳನದ ಕುರಿತು ಮಾಹಿತಿ ನೀಡಿದ್ದಾರೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ, ಪ್ರಸಾರಾಂಗದ ನಿರ್ದೇಶಕ, ಸಂತೋಷ ನಾಯಕ.

<><><>

**ಉತ್ತರಕನ್ನಡ ಜಿಲ್ಲೆಯ, ಅಘನಾಶಿನಿ ನದಿ ಕಣಿವೆ,** ಅಪರೂಪದ ಅಪ್ಪೆ ಮಿಡಿ ಮಾವಿನ ತಳಿಗಳಿಗೆ ಹೆಸರುವಾಸಿಯಾಗಿದೆ. ಈ ಹಿನ್ನೆಲೆ, ಅಘನಾಶಿನಿ ನದಿ ಕಣಿವೆಯನ್ನು, ಜೀವವೈವಿಧ್ಯತೆಯ ಪಾರಂಪರಿಕ ತಾಣ ಎಂದು ಘೋಷಿಸಿ, ಅಪರೂಪದ ಅಪ್ಪೆ ಮಿಡಿ ಮಾವಿನ ತಳಿಗಳನ್ನು ಸಂರಕ್ಷಿಸುವಂತೆ, ರಾಜ್ಯ ಜೀವವೈವಿಧ್ಯ ಮಂಡಳಿ ಅಧ್ಯಕ್ಷರಿಗೆ, ಹಿರಿಯ ಪರಿಸರವಾದಿಗಳಾದ ಅನಂತ ಹೆಗಡೆ ಅಶೀಸರ ಹಾಗೂ ಬಾಲಚಂದ್ರ ಹೆಗಡೆ ಸಾಯಿಮನೆ, ಸಮಗ್ರ ಪ್ರಸ್ತಾವವನ್ನು ಸಲ್ಲಿಸಿದ್ದಾರೆ. ಪ್ರಸ್ತಾವ ಸ್ವೀಕೃತಗೊಂಡಿದ್ದು, ಅಧ್ಯಯನ ಇನ್ನಷ್ಟೇ ಆರಂಭವಾಗಲಿದೆ. ಅಘನಾಶಿನಿ ನದಿ ಕಣಿವೆ, ಜೀವವೈವಿಧ್ಯ ಪಾರಂಪರಿಕ ತಾಣ ಪ್ರಸ್ತಾವದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಬಾಲಚಂದ್ರ ಹೆಗಡೆ ಸಾಯಿಮನೆ.

<><><>

**ಮುಖ್ಯಮಂತ್ರಿಯವರು,** ಕರ್ನಾಟಕ ಅಭಿವೃದ್ಧಿ ಯೋಜನೆಗಳ ಪ್ರಗತಿ ಪರಿಶೀಲಿಸುವಾಗ, ಆಯಾ ಜಿಲ್ಲೆಗಳ ಗ್ರಾಮೀಣ ಬದುಕಿನ ಬಗ್ಗೆ, ಮಾಧ್ಯಮಗಳಲ್ಲಿ ಪ್ರಕಟಗೊಂಡ ವರದಿಗಳನ್ನು, ಗಂಭೀರವಾಗಿ ಪರಿಗಣಿಸುತ್ತಾರೆ ಎಂದು, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ, ಕೆ.ವಿ.ಪ್ರಭಾಕರ, ತಿಳಿಸಿದ್ದಾರೆ. ಗದಗ ಜಿಲ್ಲೆ, ನಾಗಾವಿಯ, ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದಲ್ಲಿ, ಹುಬ್ಬಳ್ಳಿಯ ಅವ್ವ ಸೇವಾ ಟ್ರಸ್ಟ್, ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ, ದತ್ತಿ ನಿಧಿ ಕಾರ್ಯಕ್ರಮದಲ್ಲಿ, ತನುಜಾ ನಾಯಕ ಅವರಿಗೆ, ದತ್ತಿ ಪ್ರಶಸ್ತಿ ಪ್ರದಾನಿಸಿ, ಮಾತನಾಡಿದರು. ಬರ, ನೆರೆ ಮತ್ತು ಅತಿವೃಷ್ಟಿ ಸಂದರ್ಭದಲ್ಲಿ, ಅನೇಕ ವರದಿಗಳು, ವಿಧಾನಸೌಧದಲ್ಲಿ ತುರ್ತು ಸಭೆ ಕೈಗೊಂಡು, ಪರಿಹಾರ ಒದಗಿಸುವಲ್ಲಿ, ವೇಗವರ್ಧಕಗಳಾಗಿವೆ ಎಂದರು. ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸೇರಿದಂತೆ, ಅನೇಕ ಗಣ್ಯರು ಪಾಲ್ಗೊಂಡಿದ್ದರು.

<><><>

**'ಚರಕ ಉತ್ಸವ',** ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕು ಹೊನ್ನೇಸರದ, ಚರಕ ಶ್ರಮಜೀವಿ ಆಶ್ರಮದ ಆವರಣದಲ್ಲಿ, ನಾಳೆಯಿಂದ ಮೂರು ದಿನಗಳ ಕಾಲ, ನಡೆಯಲಿದೆ. ರಾಜ್ಯ ಅರಣ್ಯ ಕೈಗಾರಿಕಾ ನಿಗಮದ ಅಧ್ಯಕ್ಷ ಹಾಗೂ ಸಾಗರ ಕ್ಷೇತ್ರದ ಶಾಸಕ, ಗೋಪಾಲಕೃಷ್ಣ ಬೇಳೂರು, ಉತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಶಿವಮೊಗ್ಗ ಜಿಲ್ಲಾ ಪಂಚಾಯಿತಿ ಸಿ.ಇ.ಒ., ಹೇಮಂತಕುಮಾರ, ಕಾಯಕ ಪ್ರಶಸ್ತಿಗಳನ್ನು ಪ್ರದಾನಿಸಿ, ಗೌರವಿಸಲಿದ್ದಾರೆ. ಗದಗ ಜಿಲ್ಲೆ ಶಿರಹಟ್ಟಿ ತಾಲೂಕು, ಹರಿಪುರದ, ಶ್ರೀ ಬನಶಂಕರಿ ಕೈಮಗ್ಗ ನೇಕಾರರ ಸ್ವ–ಸಹಾಯ ಸಂಘ ಗುಂಪು ಕಾಯಕ ಪ್ರಶಸ್ತಿಗೆ ಭಾಜನವಾಗಿದೆ. ವಯಕ್ತಿಕ ಕಾಯಕ ಪ್ರಶಸ್ತಿಗೆ ಭಾಜನರಾದ, ಬಿ.ಎ. ಅರುಣಾ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಖುಷಿ ವ್ಯಕ್ತ ಪಡಿಸಿದ್ದಾರೆ.

<><><>

**ಇಂದು ರಾಷ್ಟ್ರೀಯ ಸಸಾರಜನಕ, ಪ್ರೊಟೀನ್ ಜಾಗೃತಿ ದಿನ.** 'ರೈಟ್ ಟು ಪ್ರೊಟೀನ್ ಎಂಬ' ಧ್ಯೇಯದೊಂದಿಗೆ, ಕಳೆದ 2020ರಲ್ಲಿ, ಮಾನವನ ಪೋಷಣೆ, ಆರೋಗ್ಯ ಮತ್ತು ಯೋಗಕ್ಷೇಮದಲ್ಲಿ, ಪ್ರೊಟೀನ್‌ಗಳ ಪ್ರಮುಖ ಪಾತ್ರದ ಬಗ್ಗೆ, ಜನಜಾಗೃತಿ ಮೂಡಿಸಲು, ಈ ದಿನ ಮೀಸಲಾಗಿದೆ. ನಮ್ಮ ದೈನಂದಿನ ಆಹಾರದಲ್ಲಿ, ಸಸ್ಯಜನ್ಯ ಹಾಗೂ ಪ್ರಾಣಿಜನ್ಯ ಪ್ರೊಟೀನ್‌ಗಳನ್ನು ಸೇವಿಸುವುದರಿಂದ, ಪ್ರೊಟೀನ್ ಕೊರತೆಯನ್ನು ಸಮರ್ಥವಾಗಿ ಎದುರಿಸಬಹುದು ಎಂಬ, ಸಂದೇಶ ಸಾರಲಾಗುತ್ತಿದೆ.

<><><>

**ನಾಳೆಯಿಂದ ರಾಜ್ಯಾದ್ಯಂತ ಆರಂಭವಾಗಲಿರುವ,** ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಗಳಿಗೆ ಹಾಜರಾಗುವ, ವಿದ್ಯಾರ್ಥಿಗಳ ಅನುಕೂಲಕ್ಕಾಗಿ, ಕರ್ನಾಟಕ ರಾಜ್ಯ, ರಸ್ತೆ ಸಾರಿಗೆ ನಿಗಮ, ಉಚಿತ ಪ್ರಯಾಣದ ಅನುಕೂಲ ಕಲ್ಪಿಸಿದೆ. ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಗಳು ಮಾರ್ಚ್ 17 ರ ವರೆಗೆ ನಡೆಯಲಿದ್ದು, ಪರೀಕ್ಷಾರ್ಥಿಗಳು, ತಮ್ಮ ವಾಸ ಸ್ಥಳದಿಂದ, ಪರೀಕ್ಷಾ ಕೇಂದ್ರಕ್ಕೆ ಹೋಗುವಾಗ, ಮತ್ತು ಹಿಂದಿರುಗುವಾಗ, ನಿಗಮದ ಬಸ್ಸುಗಳಲ್ಲಿ, ಹಾಲ್ ಟಿಕೆಟ್ ನಿರ್ವಾಹಕರಿಗೆ ತೋರಿಸಿ, ಉಚಿತವಾಗಿ ಪ್ರಯಾಣಿಸಬಹುದು ಎಂದು, ಬೆಂಗಳೂರು ಕೆ.ಎಸ್.ಆರ್.ಟಿ.ಸಿ, ಕೇಂದ್ರ ಕಛೇರಿಯ, ಮುಖ್ಯ ಸಂಚಾರ ವ್ಯವಸ್ಥಾಪಕರು ತಿಳಿಸಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಶಿವಮೊಗ್ಗ ನಗರದ ಎಲ್ಲ ಉದ್ಯಾನಗಳಲ್ಲಿ,** ರೇಡಿಯೋ ಅಳವಡಿಕೆಗೆ, ಜನಪ್ರತಿನಿಧಿಗಳ ಪ್ರಸ್ತಾವ; ಕೇಂದ್ರ ಸಚಿವ ಎಲ್.ಮುರುಗನ್, ತಾತ್ವಿಕ ಒಪ್ಪಿಗೆ.
- **ಮೈಸೂರಿನಲ್ಲಿ, ಇಂದಿನಿಂದ ಮೂರು ದಿನ,** ದಕ್ಷಿಣ ಭಾರತದ, ಕಿಸಾನ್ ಸ್ವರಾಜ್ ಸಮ್ಮೇಳನ.
- **ಉತ್ತರಕನ್ನಡ ಜಿಲ್ಲೆ, ಅಘನಾಶಿನಿ ನದಿ ಕಣಿವೆಯ,** ಅಪರೂಪದ ಅಪ್ಪೆ ಮಿಡಿ ಮಾವಿನ ತಳಿ ಸಂರಕ್ಷಣೆಗೆ, ಪರಿಸರಾಸಕ್ತರಿಂದ ಪ್ರಸ್ತಾವ.
- **ಇಂದು ರಾಷ್ಟ್ರೀಯ ಸಸಾರಜನಕ,** ಪ್ರೊಟೀನ್ ಜಾಗೃತಿ ದಿನ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>